2 ಬೈಲೂರು ಗ್ರಾಮದಲ್ಲಿ ವಿ.ಎಸ್.ಎಸ್.ಎನ್. ಸಂಘಕ್ಕೆ ಬರುತ್ತಿದ್ದ ಕೋಟಾವನ್ನು ರದ್ದುಮಾಡಿರುವುದರಿಂದ ಕಾರ್ಡುದಾರರಿಗೆ ತೊಂದರೆಯಾಗಿರುವುದು

ಶ್ರೀ ಆರ್. ಎಸ್. ನಾಯಕ್.— ಅಧ್ಯಕ್ಷರೇ, ಬೈಲೂರು ಗ್ರಾಮದಲ್ಲಿ ವಿ.ಎಸ್.ಎಸ್.ಎನ್. ಸಹಕಾರ ಸಂಘಕ್ಕೆ ಸರ್ಕಾರದವರು ಕೊಟಾವನ್ನು ರದ್ದು ಮಾಡಿರುವುದರಿಂದ ಕಾರ್ಡುದಾರರಿಗೆ ಉಂಟಾಗಿರುವ ತೊಂದರೆ ಬಗ್ಗೆ ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಖಾತೆ ಮಂತ್ರಿಗಳ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್. (ಆಹಾರ, ನಾಗರೀಕ ಸರಬರಾಜು ಮತ್ತು ಕಾನೂನು ಮಂತ್ರಿಗಳು)— ಮೇ ೧೯೮೮ರಲ್ಲಿ ಬೈಲೂರು ವ್ಯವಸಾಯ ಸೇವಾ ಸಹಕಾರ ಸಂಘದ ಅಧ್ಯಕ್ಷರು ಬಳ್ಳಾರಿ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳಿಗೆ ಪತ್ರ ಬರೆದು ತಮ್ಮ ಸೊಸೈಟಿಯು ಆಹಾರ ಪದಾರ್ಥಗಳನ್ನು ವಿತರಿಸಲು ಅನಾನುಕೂಲ ಇರುವುದರಿಂದ ವಿತರಣೆ ಕಾರ್ಯವನ್ನು ಹಿಂದಿಗೆರೆ ಗ್ರಾಹಕರ ಸೇವಾ ಸಹಕಾರ ಸಂಘಕ್ಕೆ ವಹಿಸಲು ಕೋರಿದ್ದರಿಂದ ಜೂನ್ ೧೯೮೮ ಮತ್ತು ಜುಲೈ ೧೯೮೮ರಲ್ಲಿ ಜಿಲ್ಲಾ ಪರಿಷತ್ತಿನವರು ಆಹಾರ ಪದಾರ್ಥ ವಿತರಣೆಯನ್ನು ಹಿಂದಿಗೆರೆ ಗ್ರಾಹಕರ ಸಹಕಾರ ಸಂಘಕ್ಕೆ ವಹಿಸಿದರು. ಆಪ ರಲ್ಲಿ ಬಳ್ಳಾರಿ ಉಪ ರಿಜಿಸ್ಟ್ರಾರ್, ಸಹಕಾರ ಸಂಘಗಳ ಇವರು ಜಿಲ್ಲಾ ಪರಿಷತ್ತಿಗೆ ದಿನಾಂಕ ೧೧-೭-೧೯೮೮ರಂದು ಬೈಲೂರು ಸೊಸೈಟಿಗೆ ಆಹಾರ ವಿತರಣೆಗೆ ಕೊಡಕೂಡದೆಂದು ತಿಳಿಸಿದರು. ಆದರೆ ಅವರು ಪುನಃ ದಿನಾಂಕ ೨೭-೭-೧೯೮೮ರಂದು ಬೈಲೂರು ಸೊಸೈಟಿಗೆ ಆಹಾರ ಪದಾರ್ಥಗಳನ್ನು ವಿತರಣೆಗೆ ನೀಡಬೇಕೆಂದು ಶಿಫಾರಸ್ಸು ಮಾಡಿದರು. ಆದರಂತೆ ಜಿಲ್ಲಾ ಪರಿಷತ್ತಿನವರು ಆಗಸ್ಟ್ ಮತ್ತು ಸಪ್ಟೆಂಬರ್ ತಿಂಗಳುಗಳಲ್ಲಿ ಬೈಲೂರು ವ್ಯವಸಾಯ ಸೇವಾ ಸಹಕಾರ ಸಂಘಕ್ಕೆ ಆಹಾರ ಪದಾರ್ಥಗಳನ್ನು ವಿತರಣೆಗೆ ಬಿಡುಗಡೆ ಮಾಡಿದರು. ಆದರೆ ಜಿಲ್ಲಾ ಪರಿಷತ್ತಿನ ಅಧ್ಯಕ್ಷರ ಆದೇಶದ ಮೇರೆಗೆ ಅಕ್ಟೋಬರ್ ತಿಂಗಳಿನ ಆಹಾರ ಪದಾರ್ಥಗಳ ವಿತರಣೆಯನ್ನು ಪುನಃ ಹಿಂದಿಗೆರೆ ಗ್ರಾಹಕರ ಸೇವಾ ಸಹಕಾರ ಸಂಘಕ್ಕೆ ಬಿಡುಗಡೆ ಮಾಡಲಾಗಿದೆ. ಈಗಿನ ಕಾನೂನಿನ ಪ್ರಕಾರ ವಿತರಣೆಯನ್ನು ಜಿಲ್ಲಾ ಪರಿಷತ್ತಿನ ಆದೇಶದಂತೆ ನಿರ್ವಹಿಸಬೇಕಾಗಿದೆ ಸದರಿ ಎರಡೂ ಸೊಸೈಟಿಯವರು ಆಹಾರ ಪದಾರ್ಥಗಳ ವಿತರಣೆಯನ್ನು ಸಮರ್ಪಕವಾಗಿ ಮಾಡುತ್ತಿಲ್ಲ ಎಂದು ಅಭಿಪ್ರಾಯವನ್ನು ಅಧಿಕಾರಿಗಳು ವ್ಯಕ್ತಪಡಿಸಿದ್ದಾರೆ.

ಶ್ರೀ ಎಂ. ರಾಮಪ್ಪ.— ಇದರಲ್ಲಿ ಇನ್ನೊಂದು ವಿಚಾರ ಇದೆ. ಸರಿಯಾದ ರೀತಿಯಲ್ಲಿ ಆ ಸಂಘದವರು ಆಹಾರ ಸಾಮಗ್ರಿಗಳನ್ನು ಹಂಚಿಲ್ಲ ಎನ್ನುವುದಾದರೆ ಅದಕ್ಕೆ ನಿಮ್ಮಲ್ಲಿ ಪುರಾವೆಗಳಿವೆಯೇ? ಕ್ರಮ ತೆಗೆದುಕೊಂಡಿರುವ ಬಗ್ಗೆ ಏನಾದರೂ ದಾಖಲೆಗಳಿವೆಯೆ ? ಸೊಸೈಟಿ ದೂರ ಇರುವುದರಿಂದ ಜನ ತೆಗೆದುಕೊಂಡಿಲ್ಲ. ಬಹಳ ಮಂದಿ ಅರ್ಜಿ ಕೂಡ ಕೊಟ್ಟಿದ್ದಾರೆ. ಜಿಲ್ಲಾ ಪರಿಷತ್ತಿನವರು ಏನು ಮಾಡಿದ್ದಾರೋ ಅದನ್ನು ಒಪ್ಪಿಕೊಳ್ಳಬೇಕು ಎಂದರೆ ಪಾರ್ಟಿ ರಾಜಕೀಯ ಬೇಡಬೆ ಕೆಂದು ಹೇಳುವುದಾದರೆ ಒಪ್ಪಿಕೊಳ್ಳಬೇಕಾಗುತ್ತದೆ. ಹೊನ್ನೆ ಮಾತನಾಡುತ್ತಾ ಒಂದು ಮಾತು ಹೇಳಿದೆ. ಅದೇ ಮಾತನ್ನು ಮತ್ತೆ ಹೇಳಿದರೆ ಏನೋ ಪ್ರಯೋಜನ ಮಾಡುವುದಕ್ಕೆ ಬರುತ್ತೀರಿ ಎಂದು ಹೇಳುತ್ತೀರಿ, ಇದು ನೋಡಿದರೆ ಪ್ರಯೋಜನ ಮಾಡುವುದಕ್ಕೆ ತಯಾರಿದ್ದೀರಿ ಎಂಬ ರೀತಿಯಲ್ಲಿ ಇದೆ. ಅಲ್ಲಿ ಬಹಳ ಅನ್ಯಾಯ ಮಾಡಿದ್ದಾರೆ ರಾಜಕೀಯ ದುರುದ್ದೇಶದಿಂದ ಇದೆಲ್ಲಾ ಆಗಿರುತ್ತದೆ. ಅದರ ಬಗ್ಗೆ ಬಹಳ ಪುರಾವೆಗಳಿವೆ. ಅದೆಲ್ಲಾ ಇಲ್ಲಿ ಹೇಳುವುದು ಒಳ್ಳೆಯದಲ್ಲ, ಆದ್ದರಿಂದ ಸರಿಯಾದ ರೀತಿಯಲ್ಲಿ ಕ್ರಮ ತೆಗೆದುಕೊಂಡು ಅವರಿಗೆ ಕೊಡುತ್ತಿದ್ದ ಕೋಟಾವನ್ನು ಕೊಡಬೇಕು ಎಂದು ಹೇಳುತ್ತೇನೆ. ಇದನ್ನು ನೀವು ಮಾಡಲಿಕ್ಕೇ ಬೇಕು ಜಿಲ್ಲಾ ಪರಿಷತ್ತಿನ ಅಧ್ಯಕ್ಷರು ಇದನ್ನು ಮಾಡಿದ್ದಾರೆ ಎಂದು ಹೇಳುವುದಾದರೆ ಅವರು ಬೇಕು ಎಂದು ರಾಜಕೀಯ ಮಾಡಿದ್ದಾರೆ ಎಂದು ಹೇಳಬೇಕಾಗಿದೆ ಸೊಸೈಟಿಯವರು ಇಂಥ ಇಂಥ ತಪ್ಪುಗಳನ್ನು ಮಾಡಿದ್ದಾರೆ ಎಂದು ರೆಕಾರ್ಡ್ ಇದ್ದರೆ ಕೊಡಿ ಇಂಥ ತಪ್ಪು ಮಾಡಿದ್ದಾರೆ. ಕೊಡಬಾರದಾಗಿತ್ತು ಎಂದುಹೇಳಿದರೆ ಒಪ್ಪಿಕೊಳ್ಳುತ್ತೇವೆ. ಸುಮ್ಮನೆ ಜಿಲ್ಲಾ ಪರಿಷತ್ತಿನವರು ಕೊಟ್ಟಿದ್ದನ್ನು ಇಲ್ಲಿ ಓದುತ್ತೀರಿ ಅಂದರೆ ನ್ಯಾಯ ಎಲ್ಲಿ ಸಿಗುತ್ತದೆ

† ಶ್ರೀ ಆರ್. ಎನ್. ನಾಯಕ್.—ಮಾನ್ಯ ಸಭಾಧ್ಯಕ್ಷರೆ, ವಿ. ಎಸ್. ಎಸ್, ಎನ್. ಟೈಲೂರು ಇದರ ಲೈಸನ್ಸ್ ನಂ. ೧೩೮;೮೮. ಕಾನೂನು ಪ್ರಕಾರ ಸರಿಯಾಗಿ ಲೈಸನ್ಸನ್ನು ಹೊಂದಿದೆ. ಈ ತನಕ ಆ ಸೊಸೈಟಿ ಮೇಲೆ ಅವ್ಯವಹಾರ ಮಾಡಿದ ಬಗ್ಗೆ ಯಾವುದೇ ಆಪಾದನೆಗಳು ಇಲ್ಲ. ಯಾವ ಕ್ರಮವನ್ನೂ ಆ ಸೊಸೈಟಿಯ ಮೇಲೆ ಕೈಗೊಂಡಿಲ್ಲ. ಹಾಗಿದ್ದಾಗ ಏಕಾಏಕಿ ಆ ಸೊಸೈಟಿಗೆ ನೀಡಲಾಗುತ್ತಿದ್ದಂತಹ ಆಹಾರಧಾನ್ಯಗಳನ್ನು ನಿಲ್ಲಿಸಿದ್ದು ಏಕೆ ? ಅಲ್ಲಿ ಸುಮಾರು ೧೭೬ ಕುಟುಂಬಗಳು ಇವೆ. ಈ ೧೭೬ ಕುಟುಂಬಗಳಿಗೆ ಈ ವಿ. ಎಸ್. ಎಸ್ ಎನ್. ದವರು ಆಹಾರ ಧಾನ್ಯಗಳನ್ನು ಕೊಡುತ್ತಿದ್ದರು ಅದನ್ನು ಈಗಾಗಲೇ ಪ್ರಸ್ತಾಪಿಸಲಾಗಿದೆ. ಆದರೆ ಆ ಸೊಸೈಟಿಗೆ ಕೊಡುತ್ತಿದ್ದ ತಹ ಆಹಾರ ಧಾನ್ಯಗಳನ್ನು ತಪ್ಪಿಸಿದ್ದಾರೆ. ಈಗ ಈ ೧೭೬ ಕುಟುಂಬಗಳು ೫ ಕಿಲೋಮೀಟರ್ ದೂರಕ್ಕೆ ಹೋಗಿ ಇಲ್ಲಿರುವಂತಹ ಇನ್ನೊಂದು ಹೊಸ ಸೊಸೈಟಿಯಿಂದ ಆಹಾರ ಪದಾರ್ಥಗಳನ್ನು ತರಬೇಕಾಗಿದೆ. ಇದರಿಂದ ಆ ಕಾರ್ಡುದಾರರಿಗೆ ಬಹಳ ಹಾನಿಯಾಗಿದೆ. ಇದು ಒಂದು ಎರಡನೆಯದಾಗಿ ಯಾವುದೇ ಒಂದು ಸೊಸೈಟಿಗೆ ಕೊಡತಕ್ಕ ಆಹಾರ ಧಾನ್ಯದ ಕೋಟಾವನ್ನು ತಪ್ಪಿಸಬೇಕಾದರೆ ಆವರ ಮೇಲೆ ಆಪಾದನೆಗಳು ಇರಬೇಕಾಗುತ್ತದೆ. ಮಾನ್ಯ ಕಾನೂನು ಮಂತ್ರಿಗಳೇ ಈ ವಿಷಯಕ್ಕೂ ಜವಾಬ್ದಾರರಾಗಿದ್ದಾರೆ ಆ ತರಹದ ಆಪಾದನೆಗಳು ಇದ್ದಿದ್ದರೆ ನಾವು ಹೇಳುತ್ತಿದ್ದೆವು, ಅದಕ್ಕೆ ಕೂಡಬೇಡಿ, ಅಂತ. ಆದರೆ, ಆ ರೀತಿಯ ಆಪಾದನೆಗಳು ಇದ್ದಿದ್ದರೆ ಅವುಗಳನ್ನು ಸದನದಲ್ಲಿಡಬೇಕಾಗುತ್ತದೆ. ಆಪಾದನೆಗಳನ್ನು ರುಜುವಾತು ಮಾಡುವುದಕ್ಕಾಗುವುದಿಲ್ಲವೆಂದು ಹೇಳುವುದಾದರೆ ಅದಕ್ಕೆ ಆದೇಶವನ್ನು ಹೊರಡಿಸಬೇಕಾಗುತ್ತದೆ. ಆಂದರೆ ಈ ಹಿಂದಿನ ಸೊಸೈಟಿಗೇ ಕೊಡಬೇಕಾಗುತ್ತದೆಂದು. ಮತ್ತು ಜಿಲ್ಲಾ ಪರಿಷತ್ತಿಗೆ ಅಧಿಕಾರವನ್ನು ಕೊಟ್ಟ ಮೇಲೆ ಅದನ್ನು ಅವರು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳಬೇಕೇ ಹೊರತು. ಇಂತಹ ಕಾರ್ಯಗಳಿಗಾಗಿ ಉಪಯೋಗಿಸುವುದಕ್ಕಾಗಿ ಕಾನೂನು ಅನ್ನು ಕೊಟ್ಟಿಲ್ಲವೆಂದು ನಾವು ಹೇಳಬೇಕಾಗುತ್ತದೆ. ಅವರು ಕಾರಣಗಳನ್ನು ಹೇಳಲಿಲ್ಲ. ಅದನ್ನೂ ಕೂಡ ರುಜುವಾತು ಮಾಡಬೇಕಾಗುತ್ತದೆ ಇಂತಿಂತಹ ಕಾರಣಗಳ ಮೇಲೆ ಜೋಟಾವನ್ನು ರದ್ದುಪಡಿಸಲಾಗಿದೆ ಅಂತ ಹೇಳಬೇಕಾಗುತ್ತದೆ. ಯಾವುದೇ ಕಾರಣ ಇಲ್ಲದೆ ಜಿಲ್ಲಾಪರಿಷತ್ತಿನ ಅಧ್ಯಕ್ಷರು ಇಂತಹವರಿಗೆ ಸ್ಟಾಪ್ ಮಾಡಿ ಅಂತ ಹೇಳಿದರೆ ಆ ರೀತಿ ಮಾಡುವುದಕ್ಕಾಗುವುದಿಲ್ಲ ಆ ರೀತಿಯ ಜಿಲ್ಲಾಪರಿಷತ್ತನ್ನೂ ನಾವು ಒಪ್ಪುವುದಿಲ್ಲ. ಈ ರೀತಿ ಜಿಲ್ಲಾಪರಿಷತ್ತಿನವರು ತಮ್ಮ ಮನಬಂದಂತೆ ಆದೇಶವನ್ನು ಹೊರಡಿಸುವುದಾದರೆ, ಅದನ್ನು ಇಲ್ಲಿ ನಾವು ಒಪ್ಪುವುದಕ್ಕಾಗುವುದಿಲ್ಲ. ಅವರ ಆದೇಶವನ್ನು ಮಂರು ಪರಿಶೀಲನೆ ಮಾಡುವುದಕ್ಕೆ ಸರ್ಕಾರದವರೇ ಆದೇಶವನ್ನು ಹೊರಡಿಸಬೇಕು. ಈ ವಿ. ಎಸ್ ಎಸ್.ಎನ್ ಸಂಘಕ್ಕೆ ಕೊಡುತ್ತಿದ್ದಂತಹ ಆಹಾರಧಾನ್ಯದ ಜೋಟಾವನ್ನು ನಿಲ್ಲಿಸಿರುವುದನ್ನು ಮಾರು ಪರಿಶೀಲನೆ ಮಾಡಿ ಆವರಿಗೇ ಕೊಡುವಂತೆ ಇವತ್ತಿನ ದಿವಸವೇ ಆದೇಶವನ್ನು ಹೊರಡಿಸಬೇಕು.

ಶ್ರೀ ಎ ಲಕ್ಷ್ಮೀಸಾಗರ್.—ಆಹಾರಧಾನ್ಯಗಳ ವಿತರಣೆಯ ಕೆಲಸ ಈಗಿನ ಕಾನೂನು ಪ್ರಕಾರ ಜಿಲ್ಲಾಪರಿಷತ್ತಿನ ವ್ಯಾಪ್ತಿಗೆ ಬರುತ್ತದೆ ಜಿಲ್ಲಾ ಪರಿಷತ್ತಿನ ಆದೇಶದಂತೆ ಈ ಕೆಲಸವನ್ನು ನಾವು ಮಾಡಬೇಕಾಗುತ್ತದೆ. ಜಿಲ್ಲಾಪರಿಷತ್ತಿನ ಅಧ್ಯಕ್ಷರು ಆದೇಶವನ್ನು ಕೊಟ್ಟ ರೀತಿಯಲ್ಲಿ ಬದಲಾವಣೆ ಮಾಡಿದ್ದೇವೆ. ಮಾಡಿರುವುದು ಸರಿಯಿಂತ ಕೂಡ ನಾನು ಹೇಳುತ್ತಿಲ್ಲ. ಆದರೆ ಈಗಿರುವ ಕಾನೂನಿನ ವ್ಯಾಪ್ತಿಯಲ್ಲಿ ಅವರ ಆದೇಶವನ್ನು ಬಿಟ್ಟು ಅನ್ಯತಾ ಮಾರ್ಗ ಇಲ್ಲದೆ ಕಾರ್ಯಕ್ರಮ ಕೈಗೊಳ್ಳಬೇಕಾಗಿದೆ, ಆದ್ದರಿಂದ ನಾನು ಇರತಕ್ಕ ವಿಚಾರವನ್ನು ಹೇಳಿದ್ದೇನೆ. ರಾಜಕೀಯದ ವಿಚಾರ ಹೇಳಿದರು. ಅದು ನನಗೆ ಗೊತ್ತಿಲ್ಲ. ಇರಬಹುದು. ಇಲ್ಲ ಅಂತ ಹೇಳುವುದಿಲ್ಲ. ಆಮೇಲೆ ಮಾನ್ಯ ಸದಸ್ಯರಾದ ಶ್ರೀ ನಾಯಕ್‌ರವರು ಈ ತೀರ್ಮಾನವನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ ಅಂತ ಹೇಳಿದರು. ಅವರ ಅಭಿಪ್ರಾಯ ಹೇಳಿದ್ದಾರೆ. ನಿಜ. ಈಗಿರತಕ್ಕ ಕಾನೂನು ಪ್ರಕಾರ ಅವರದ್ದೇ ಕೊನೆ ತೀರ್ಮಾನ ಅದರ ಮೇಲೆ ಅಪೀಲು ರಿವಿಜನ್‌ಗೂ ಅವಕಾಶ ಇಲ್ಲ. ಆಮೇಲೆ ನನ್ನ ಹತ್ತಿರ ಸಂಬಂಧಪಟ್ಟವರು ಅಪೀಲು ಹಾಕಿದರು. ಇದಕ್ಕೆ ಸ್ಟೇ ಆರ್ಡರ್ ಕೊಡಬೇಕೆಂದು ಸಂಬಂಧಪಟ್ಟವರು ಬಂದು ನನ್ನನ್ನು ಕೇಳಿದರು. ನಾನು ಹೇಳಿದೆ. ಜಿಲ್ಲಾಧಿಕಾರಿ

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರ ಭಾಷಣ ಆಥವಾ ಟಿಪ್ಪಣಿಯನ್ನು ತರಿಸ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಗಳಿಂದ ಪರಿಶೀಲನೆ ಮಾಡುತ್ತೇವೆ. ತರಿಸಿದ ನಂತರ ಇದರ ಬಗ್ಗೆ ಪರಿಶೀಲನೆ ಮಾಡುತ್ತೇನೆಯೇ ಹೊರತು ಏಕಾಏಕಿ ಯಾವ ಕ್ರಮವನ್ನೂ ತೆಗೆದುಕೊಳ್ಳುವುದಿಲ್ಲ ಅಂತ ಹೇಳಿದೆ ನಾನು ಅವರಿಗೆ ಹೇಳಿ ಕಳುಹಿಸಿದೆ, ವರದಿಯನ್ನು ಕೇಳಿದ್ದೇನೆ. ಬರಲಿ ನೋಡುತ್ತೇನೆಂದು ಹೇಳಿ ಕಳುಹಿಸಿದ್ದೇನೆ. ಈಗಿನ ಕಾನೂನು ಪ್ರಕಾರ ಜಿಲ್ಲಾಪರಿಷತ್ತಿನ ವ್ಯಾಪ್ತಿಯನ್ನು ಬಿಟ್ಟರೆ ಬೇರೆ ರೀತಿಯಲ್ಲಿ ನಡೆದು ಕೊಳ್ಳಲು ಕಾನೂನಿನಲ್ಲಿ ದಾರಿಯೇ ಇಲ್ಲ. ಕಾನೂನನ್ನು ಬದಲಾಣೆ ಮಾಡಬೇಕೆಂದು ಸರ್ಕಾರ ಯೋಚನೆ ಮಾಡುತ್ತಿದೆ. ಬದಲಾವಣೆ ಮಾಡಿದ ನಂತರ ನೀವು ಹೇಳಿದ ಹಾಗೆ ಕ್ರಮ ತೆಗೆದು ಕೊಳ್ಳುವುದಕ್ಕೆ ಸಾಧ್ಯವಾಗಬಹುದು ಎಂದು ನನಗನ್ನಿಸತ್ತದೆ. ಈಮೇಲೆ ಮಾನ್ಯ ರಾಮಪ್ಪನವರು ನಿಮ್ಮ ಹತ್ತಿರ ಪುರಾವೆ ಇದೆಯೇ ಇದ್ದರೆ ಕೊಡಿ ಎಂಬುದಾಗಿ ಸೂಚಿಸಿದ್ದಾರೆ. ಆಹಾರಧಾನ್ಯಗಳನ್ನು ಸರಬರಾಜು ಮಾಡತಕ್ಕಂತಹವರು ಅವರೇ ಹೋಗಿ ತನಿಖೆ ನಡೆಸಿದಾಗ ತೂಕ ಸರಿಯಾಗಿರಲಿಲ್ಲ ಅಳತೆ ಸರಿಯಾಗಿರಲಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಬುಕ್ಸ್‌ನ್ನು ಸೀಜ್ ಮಾಡಿದ್ದೇವೆಂದು ಅವುಗಳು ನಮ್ಮ ಹತ್ತಿರವೇ ಇವೆ ಎನ್ನುವ ಮಾತನ್ನು ಹೇಳಿದ್ದಾರೆ. ಇವನ್ನೆಲ್ಲಾ ನೋಡಿದ ಮೇಲೆ ಜಿಲ್ಲಾ ಪರಿಷತ್ತಿನವರು ಹೇಳಿದ ಹಾಗೆ ನಾವು ಮಾಡಬೇಕಾಗುತ್ತದೆ. ಪರಿಸ್ಥಿತಿ ಈ ರೀತಿ ಇದೆ, ಇದರ ಬಗ್ಗೆ ಪೂರ್ಣವಾಗಿ ವಿಚಾರ ಮಾಡಿ ಇರತಕ್ಕ ಕಾನೂನನ್ನು ತಿದ್ದುಪಡಿ ಮಾಡಬೇಕಾ ಗುತ್ತದೆ ಎನ್ನುವ ಮಾತನ್ನು ಈ ಸಂಬಂಧದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅವರು ಯಾರಿಗೆ ಕೊಡಬೇಕೆಂದು ಜಿಲ್ಲಾಪರಿಷತ್ತಿನವರು ಹೇಳಿದ್ದಾರೋ ಅವರಿಗೆ ಕೊಟ್ಟಿದ್ದೇವೆ.

ಶ್ರೀ ಆರ್. ಎನ್. ನಾಯಕ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಜಿಲ್ಲಾ ಪರಿಷತ್ತಿಗೆ ಅಧಿಕಾರ ಕೊಟ್ಟು ಅವರು ವ್ಯಕ್ತಪಡಿಸುವ ಅಸಹಾಯಕತೆಯನ್ನು ನೋಡಿದರೆ ಕನಿಕರವಾಗುತ್ತದೆ. ಭಸ್ಮಾಸುರನ ಕೈಗೆ ಅಧಿಕಾರ ಕೊಟ್ಟು ಈಶ್ವರ ಬೀದಿಬೀದಿ ಅಲೆದಂತೆ ಇವರ ಪರಿಸ್ಥಿತಿಯಾಗಿದೆ. ತಪ್ಪು ಜನರಿಗೆ ಅಧಿಕಾರ ಕೊಟ್ಟರೆ ಈ ರೀತಿಯ ಕಷ್ಟಗಳು ಆಗುತ್ತವೆ. ರಿಪೇರಿ ಮಾಡಿ ಎಂದು ಮಂತ್ರಿಯವರಿಗೆ ಹೇಳಿದರೆ ಅವರೇ ಅಸಹಾಯಕತೆಯನ್ನು ತೋರಿಸಿದರೆ ಜನರು ಎಲ್ಲಿಗೆ ಹೋಗ ಬೇಕು ? ನೀವು ಬೇರೆ ರೀತಿಯಲ್ಲಿ ಇದನ್ನು ಪರಿಶೀಲನೆ ಮಾಡಿ. ತಪ್ಪು ಮಾಡಿದ ಸೊಸೈಟಿ ಮೇಲೆ ಕೇಸ್ ಹಾಕಿಸಿ ಅದು ಬಿಟ್ಟು ಅಸಹಾಯಕತೆ ಪ್ರದರ್ಶನ ಮಾಡಿ ಅತ್ತರೆ ಏನು ಪ್ರಯೋಜನ ? ಈ ಬಗ್ಗೆ ಮುಖ್ಯಮಂತ್ರಿಯವರು ಹೇಳಲಿ. ಆಲ್ಲಿಯ ಸೊಸೈಟಿದು ತಪ್ಪು ಇದ್ದರೆ ಕ್ರಮ ತೆಗೆದು ಕೊಳ್ಳಲಿ. ಅವರದ್ದು ತಪ್ಪು ಇಲ್ಲ ಎಂದು ಗೊತ್ತಾಗುವವರೆಗೆ ತಡೆಹಿಡಿಯಬಹುದಲ್ಲವೇ ? ಬಳ್ಳಾರಿ ಜಿಲ್ಲಾಪರಿಷತ್ತೇನು ಸ್ಟೇಟ್ ಆಯಿತೇ ? ಬಳ್ಳಾರಿಯೇನೂ ರಾಜ್ಯವಲ್ಲ. ಕರ್ನಾಟಕ ರಾಜ್ಯದ ಕೆಳಗೆ ಬಳ್ಳಾರಿ ಜಿಲ್ಲಾ ಪರಿಷತ್ ಇದೆ. ತಾವೇ ಹೇಳಿ ಅಧ್ಯಕ್ಷರೇ ತಪ್ಪು ಮಾಡಿದ್ದರೆ ಸೊಸೈಟಿಗೆ ಶಿಕ್ಷೆ ಕೊಡಿ, ತಪ್ಪು ಇಲ್ಲದಿದ್ದರೆ ಆಹಾರಧಾನ್ಯ ಕೊಡಿ ಎಂದು ಹೇಳುತ್ತೇವೆ

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ೨ ಸೊಸೈಟಿಗಳಲ್ಲಿ ಇಲ್ಲಿ ಪೈಪೋಟಿ ಇದೆ. ಜಿಲ್ಲಾಪರಿಷತ್ತಿನ ಅಧ್ಯಕ್ಷರೇ ಒಂದು ಸಲ ಒಂದಂ ಸೊಸೈಟಿಗೆ ಕೊಡಿ ಎಂದರು. ಆಮೇಲೆ ಅದಕ್ಕೆ ಬೇಡ ಇನ್ನೊಂದಕ್ಕೆ ಕೊಡಿ ಎಂದು ಹೇಳಿದರು. ಕಾನೂನು ಪ್ರಕಾರ ಜಿಲ್ಲಾ ಪರಿಷತ್ ಹೇಳಿದ ಹಾಗೆ ನಾವು ಮಾಡಬೇಕಾಗುತ್ತದೆ. ಬೇರೆ ಮಾರ್ಗ ಇಲ್ಲ. ನಾವು ಅಸಹಾಯಕತೆ ತೋರಿಸುತ್ತಿದ್ದೇವೆಂದು ಅವರು ಹೇಳಿದ್ದಾರೆ, ಅವರು ಹೇಳುವ ಧಾಟಿಯಲ್ಲಿ ಅವರು ಹೇಳಿದ್ದಾರೆ. ಅದಕ್ಕೆ ನನ್ನ ಅಭ್ಯಂತರವಲ್ಲ, ಕಾನೂನು ವಿರುದ್ಧವಾಗಿ ನಡೆದುಕೊಳ್ಳುವುದಕ್ಕೆ ನನ್ನ ಕೈಯ್ಯಲ್ಲಿ ಆಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಜಿಲ್ಲಾ ಪರಿಷತ್ತು ಮಾಡಿದ್ದನ್ನು ಸದನದ ಗಮನಕ್ಕೆ ತಂದಾಗ ನೀವು ಕ್ರಮ ತೆಗೆದುಕೊಳ್ಳುವುದಿಲ್ಲವೆಂದರೆ ಹೇಗೆ ? ಬಳ್ಳಾರಿ ಏನು ಸ್ವತಂತ್ರ ರಾಜವೇ ?

SRI A. LAKSHMISAGAR.—A law that is approved by this House has to be implemented. I cannot go against the provisions of the law. I am thinking of amending this law providing for the powers to the government in this regard.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸೊಸೈಟಿಯಲ್ಲಿ ಏನಾ ನಡೆದರೂ ಏನೂ ಮಾಡುವುದಕ್ಕಾಗುವುದಿಲ್ಲವೇ ? ಇದು ಏಕೆ ?

ಶ್ರೀ ಎಸ್. ಆರ್. ಬೊಮ್ಮಾಯಿ —ಇದರಲ್ಲಿ ವಿಶೇಷತೆ ಇದೆ. ಅಧಿಕಾರ ವಿಕೇಂದ್ರೀಕರಣ ಮಾಡುವುದನ್ನು ನಾವು ಒಪ್ಪಿಕೊಂಡಿದ್ದೇವೆ. ಕೆಲವು ಸಂಸ್ಥೆಗಳಿಗೆ ನಾವು ಅಧಿಕಾರವನ್ನು ಕೊಡುತ್ತೇವೆ. ನಮ್ಮ ರಾಜ್ಯಾಂಗದ ಪ್ರಕಾರ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಕೆಲವೊಂದು ಅಧಿಕಾರಗಳು ಇವೆ. ರಾಜ್ಯ ಸರ್ಕಾರದ ಅಧಿಕಾರದಲ್ಲಿ ಕೇಂದ್ರ ಸರ್ಕಾರ ತೆಗೆದುಹಾಕುವುದಕ್ಕೆ ಬರುವುದಿಲ್ಲ. ಇದು ಒಂದು ಸ್ವತಂತ್ರ ಸಂಸ್ಥೆ. ಇದಕ್ಕೆ ಕಾನೂನು ಪ್ರಕಾರವೇ ಇದೆ ಏನಾದರೂ ತಪ್ಪು ಮಾಡಿದ್ದರೆ ಸಲಹೆಯನ್ನು ಕೊಡಲಾಗುತ್ತದೆ. ಅವುಗಳ ಮೇಲೆ ನಮ್ಮ ಕೊನೇ ಅಸ್ತ್ರ ಎಂದರೆ ಸೂಪರ್‌ಸೀಡ್ ಮಾಡುವುದು. ಹಾಗೇ ರಾಜ್ಯ ಸರ್ಕಾರವನ್ನು ಕಿತ್ತುಹಾಕುವ ಅಧಿಕಾರ ಕೇಂದ್ರಕ್ಕೆ ಇದೆ ಜಿಲ್ಲಾಪರಿಷತ್ ಅನೇಕ ತಪ್ಪುಗಳನ್ನು ಮಾಡಿದರೆ ಅದನ್ನು ರದ್ದು ಮಾಡುವ ಅಧಿಕಾರ ರಾಜ್ಯಕ್ಕೆ ಇದೆ. ತಪ್ಪು ಮಾಡುತ್ತಾರೋ, ಸರಿ ಮಾಡುತ್ತಾರೋ ಇವು ಹೊಸದಾಗಿ ಬಂದಿರುವ ಸಂಸ್ಥೆಗಳು. ಈ ಸಂಸ್ಥೆಗಳನ್ನು ತಿದ್ದತಕ್ಕದ್ದು ಇದೆ. ಈ ಸಂಸ್ಥೆಗಳು ಅಧಿಕಾರಕ್ಕೆ ಬಂದ ಮೇಲೆ ಎವಾಲ್ಯೂಯೇಷನ್ ಕಮಿಟಿ ನೇಮಿಸಿದ್ದೇವೆ. ಈ ಸಂಸ್ಥೆಗಳು ನಡೆದಂತೆ ಏನಾದರೂ ತಿದ್ದುಪಡಿಗಳನ್ನು ಮಾಡುವುದಿದ್ದರೆ ಅವು ಈ ಮನೆಯ ಮುಂದೆ ಬರುತ್ತವೆ. ಇವತ್ತು ಜಿಲ್ಲಾಪರಿಷತ್ ಹಾಗೂ ಮಂಡಲಗಳ ದಿನನಿತ್ಯದ ವ್ಯವಹಾರಗಳ ಬಗ್ಗೆ ಕೆಲವೊಂದು ವಿಚಾರಗಳನ್ನು ನಾವು ಚರ್ಚೆ ಮಾಡುತ್ತಿದ್ದೇವೆ ಈ ಬಗ್ಗೆ ತಾವೂ ಕೂಡಾ ಸಲಹೆಗಳನ್ನು ಮಾಡಬಹುದು. We have to amend wherever it is necessary. ಈಗ ಇರತಕ್ಕ ಕಾನೂನನ್ನು ಜಾರಿಗೆ ಕೊಟ್ಟಿದ್ದೇವೆ. ಇವುಗಳಲ್ಲಿ ಕೆಲವೊಂದು ಬದಲಾವಣೆ ಅವಶ್ಯಕ ಇದ್ದರೆ ಅದನ್ನು ಮಾಡಲು ಸರ್ಕಾರ ಸಿದ್ಧವಿದೆ. ನಮಗೆ ಸಂಪೂರ್ಣವಾದ ವಿಕೇಂದ್ರೀಕರಣದಲ್ಲಿ ನಂಬಿಕೆ ಇದೆ. ಇವತ್ತು ತಪ್ಪು ಮಾಡಿದರೆ ನಾಳೆ ಒಳ್ಳೆಯದು ಆಗುತ್ತದೆ. ಈ ನೀತಿಗೆ ಸರ್ಕಾರ ಬದ್ಧವಾಗಿದೆ.

ಶ್ರೀ ಎಂ ರಾಮಪ್ಪ.—ನಿಮ್ಮ ಕಾನೂನು ಮಾಡುವತನಕ ಎಲ್ಲಾ ಸತ್ತು ಹೋಗಲಿ ಎಂದು ಮಾಡಿದ್ದೀರಾ ?

ಶ್ರೀ ಆರ್. ಎನ್. ನಾಯಕ್ —ಮುಖ್ಯಮಂತ್ರಿಗಳಿಗೆ ಅಧಿಕಾರವಿದೆ, ಜಿಲ್ಲಾಪರಿಷತ್‌ನ ಅಧ್ಯಕ್ಷರುಗಳು ಏನಾದರೂ ತಪ್ಪು ಆದೇಶಗಳನ್ನು ಕೊಟ್ಟರೆ ಅದನ್ನು ಸ್ಟೇ ಕೊಡಲಿಕ್ಕೆ ಅಧಿಕಾರವಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಆ ರೀತಿ ಮಾಡಲಿಕ್ಕೆ ಬರುವುದಿಲ್ಲ. ಕಾನೂನು ಪ್ರಕಾರ ತಾವು ಕೂಡ ಜಿಲ್ಲಾಪರಿಷತ್‌ನ ಸದಸ್ಯರಿದ್ದೀರಿ ನೀವು ಅಲ್ಲಿ ಚರ್ಚೆ ಮಾಡಬೇಕು. ಇದನ್ನು ಸಾರ್ವಜನಿಕರ ಗಮನಕ್ಕೆ ತನ್ನಿ, ತಾವು ಸದಸ್ಯರು ಚರ್ಚೆಮಾಡಿ ಬದಲಾವಣೆ ಮಾಡಿ.

ಶ್ರೀ ಆರ್. ಎನ್. ನಾಯಕ್.—ನಾವು ಜಿಲ್ಲಾಪರಿಷತ್‌ನಲ್ಲಿ ಏನು ಚರ್ಚೆ ಮಾಡಂವುದು ಎಲ್ಲಾ ನಿಮ್ಮ ಹತ್ತಿರನೇ ಇದೆ ಟೀಚರ್ಸ್ ರಿಕ್ರೂಟ್‌ಮೆಂಟ್ ಕಮಿಟಿಯನ್ನು ಮಾಡಿ ಅದು ಸರಿಯಿಲ್ಲ ಎಂದಾಗ ಅದನ್ನು ಸ್ಟೇ ಮಾಡಲಿಲ್ಲವೇ ? ಶಿವಮೊಗ್ಗ ಜಿಲ್ಲಾ ಟೀಚರ್ಸ್ ರಿಕ್ರೂಟ್‌ಮೆಂಟ್ ಕಮಿಟಿಯನ್ನು ರದ್ದು ಮಾಡಲಿಲ್ಲವೇ ?

ಅಧ್ಯಕ್ಷರು.—ಮೂರು ಜನರು ಈ ರೀತಿ ಎದ್ದು ಮಾತನಾಡಿದರೆ ಹೇಗೆ ? ಆ ವಿಷಯ ಆಗಲೇ ಮುಕ್ತಾಯವಾಗಿದೆ. ನೀವು ಒಂದು ಅರ್ಜಿಯನ್ನು ಕೊಡಿ ಅದನ್ನು ಅರ್ಜಿಗಳ ಸಮಿತಿಗೆ ಹಾಕೋಣ. ಇದು ಸರಿಯಲ್ಲ. ಮಂತ್ರಿಗಳು ಸರಿಯಾಗಿ ಉತ್ತರವನ್ನು ಕೊಟ್ಟಿದ್ದಾರೆ. ತಮಗೂ ಕೂಡ ಸಾಕಷ್ಟು ಅವಕಾಶವನ್ನು ಕೊಟ್ಟಿದ್ದೇನೆ. ಮಾನ್ಯ ಸದಸ್ಯರಾದ ರಾಮಪ್ಪನವರು ಬೆಲ್‌ನೊಳಗೆ ಬರುವುದು ಸರಿಯಲ್ಲ.

(ಮಾನ್ಯ ಸದಸ್ಯರಾದ ರಾಮಪ್ಪನವರು ಬೆಲ್‌ನೊಳಗೆ ಬಂದು ಸಭಾಧ್ಯಕ್ಷರ ಮುಂಭಾಗಕ್ಕೆ ಬಂದರು.)

ಅಧ್ಯಕ್ಷರು.—ನೀವು ಏನೇ ಮಾತನಾಡಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ. ಏನಾದರೂ ಅನ್ಯಾಯವಾಗಿದ್ದರೆ ಪೆಟಿಷನ್ ಕಮಿಟಿಗೆ ಅರ್ಜಿ ಹಾಕಿ. ಅವರು ಸರ್ಕಾರಕ್ಕೆ ಅಥಾರಿಟಿಯಿಲ್ಲವೆಂದು ಹೇಳುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ದಯವಿಟ್ಟು ಸ್ವಲ್ಪ ಕೇಳಿ, ಕಾನೂನು ಮಾಡತಕ್ಕವರು ನಾವು, ಅದು ಸರಿಯಿಲ್ಲದಿದ್ದರೆ ಅದಕ್ಕೆ ತಿದ್ದುಪಡಿ ತರತಕ್ಕವರು ನಾವೇ ಆ ಅಧಿಕಾರ ಈ ಮನೆಗೆ ಇದೆ.

ನಾವು ಕೆಲವು ಅಧಿಕಾರಗಳನ್ನು ಜಿಲ್ಲಾಪರಿಷತ್‌ನವರಿಗೆ ಕೊಟ್ಟಿದ್ದೇವೆ. ಅವರು ಸರಿಯಾಗಿ ನಡೆದುಕೊಳ್ಳುತ್ತಿಲ್ಲವೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅವರು ತಪ್ಪು ನಡೆದುಕೊಂಡಿದ್ದರೆ ಅದನ್ನು ಸರಿಪಡಿಸತಕ್ಕ ಅಧಿಕಾರ ನಿಮಗೆ ಇದೆ. ಈ ಮನೆಗೆ ಇದೆ. ಈಗ ಏನಾಗಿದೆ ಅಂದರೆ ಕೆಲವು ಜಿಲ್ಲಾಪರಿಷತ್ ನವರು ಅಧಿಕಾರವನ್ನು ತಮ್ಮ ಕೈಯಲ್ಲಿ ತೆಗೆದುಕೋಡು ಮನಸ್ಸಿಗೆ ಬಂದಹಾಗೆ ಕೆಲಸ ಮಾಡುತ್ತಿದ್ದಾರೆ. ಅದಕ್ಕಾಗಿ ಅವರ ಬೆನ್ನಿಗೆ ಏನಿದೆ ಅದರ ಬಗ್ಗೆ ಸ್ವಲ್ಪ ಗಮನಹರಿಸಿ ಕ್ರಮ ತೆಗೆದುಕೊಳ್ಳುವುದು ಒಳ್ಳೆಯದು. ನೀವು ಆಸಹಾಯಕರು ಎನ್ನುವ ಪ್ರವೃತ್ತಿಯನ್ನು ತೋರಿಸಿದರೆ ನಾಳೆ ಎಲ್ಲಾ ಕಡೆ ಎಕ್ಸ್‌ಪ್ಲಾಯಿಟೇಶನ್ ಶುರುವಾಗುತ್ತದೆ. ತಮ್ಮ ಗಮನಕ್ಕೆ ಬಂದಿದೆಯೋ ಏನೋ ಗೊತ್ತಿಲ್ಲ ಜಿಲ್ಲಾ ಪರಿಷತ್ ಹಾಗೂ ಮಂಡಲ ಪಂಚಾಯತಿಗಳಲ್ಲಿ ಅಧಿಕಾರ ವಿಕೇಂದ್ರೀಕರಣವಾಗಿದೆ ಅದನ್ನು ನಾವು ಮಾಡಿದ್ದೇವೆಂದು ಹೇಳುತ್ತೀರಿ. ಎಲ್ಲರೂ ಹೇಳುತ್ತಾರೆ. ಮೊದಲು ವಿಲೇಜ್ ಪಂಚಾಯತಿ ಎಂದು ಒಂದು ಹಳ್ಳಿಯಲ್ಲಿರುತ್ತಿತ್ತು. ಈಗ ತಾವು ೧೦-೨೦ ಹಳ್ಳಿಗಳನ್ನು ಸೇರಿಸಿ ಮಂಡಲ ಪಂಚಾಯತಿಯೆಂದು ಮಾಡಿದ್ದೀರಿ ಆ ಮಾತು ಬೇರೆ. ನನ್ನ ಪ್ರಶ್ನೆ ಏನೆಂದರೆ ಲೋಕಲ್ ಪ್ರಿಜುಡೀಸ್ ಹೊಟ್ಟಿಕೊಂಡು ಕ್ಷುಲ್ಲಕ ರಾಜಕೀಯ ಮಾಡುತ್ತಿದ್ದಾರೆ. ಸರಿಯಾಗಿ ನಡೆಸುತ್ತಿದ್ದವರನ್ನು ತೆಗೆದು ತಮಗೆ ಬೇಕಾದವರಿಗೆ ಕೊಡುತ್ತಿದ್ದಾರೆ. ಹೆಲ್ತ್ ಡಿಪಾರ್ಟ್‌ಮೆಂಟಿನಲ್ಲಿ ಒಂದು ಕಮಿಟಿ ಮಾಡಿದ್ದಾರೆ. ಆಲ್ಲಿ ಜಿಲ್ಲಾಪರಿಷತ್ತಿನ ಸದಸ್ಯರಾಗಿರುವವರು ಡಾಕ್ಟರುಗಳನ್ನು ಎದುರಿಸುತ್ತಿದ್ದಾರೆ. ಇಂತಹ ಎಲ್ಲಾ ತೊಂದರೆಗಳಿವೆ, ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ತಕ್ಷಣ ಏನಾದರೂ ಒಂದು ಪರಿಹಾರವನ್ನು ಕಂಡುಹಿಡಿದು ಸರಿಪಡಿಸಬೇಕು. ಏನೂ ಮಾಡುವದಕ್ಕೆ ಬರುವುದಿಲ್ಲ ಅಂದರೆ ಬಹಳ ಕಷ್ಟವಾಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ತಮ್ಮ ಅನುಭವಗಳಿಂದ ಇದಕ್ಕೆ ಯಾವರೀತಿ ತಿದ್ದುಪಡಿ ಮಾಡಬೇಕೆಂಬುದನ್ನು ವಿಚಾರ ಮಾಡೋಣ. ಆಮೇಲೆ ಅದು ಈ ಮನೆಯ ಮುಂದೆ ಬರುತ್ತದೆ.

ಶ್ರೀ ಎಂ. ರಾಮಪ್ಪ.—ತಕ್ಷಣ ಸ್ಟೇ ಕೊಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಸ್ಟೇ ಕೊಡತಕ್ಕಂಥ ಅಧಿಕಾರ ಸದನಕ್ಕೆ ಇಲ್ಲ. ತಮ್ಮ ಅಭಿಪ್ರಾಯಗಳನ್ನು ಜಿಲ್ಲಾಪರಿಷತ್ತಿನ ಮುಖ್ಯಕಾರ್ಯದರ್ಶಿಯವರಿಗೆ ತಿಳಿಸುತ್ತೇವೆ. ದಯವಿಟ್ಟು ಕೇಳಿ. ತಾವು ಅಲ್ಲಿ ಸದಸ್ಯರಿದ್ದೀರಿ. ಅಲ್ಲಿ ಚರ್ಚೆ ಏಕೆ ಮಾಡಬಾರದು ? ಜಿಲ್ಲಾ ಪರಿಷತ್ತಿನಲ್ಲಿ ಈ ವಿಚಾರ ಎತ್ತಿ ನಿರ್ಣಯ ತೆಗೆದುಕೊಳ್ಳುವುದಕ್ಕೆ ಆಗುತ್ತದೆ.

ಶ್ರೀ ಎಂ. ರಾಮಪ್ಪ.—ಆಧ್ಯಪರಿಗೆ ಸತ್ತುಹೋಗಿ ಬಿಡುತ್ತಾರೆ. ನಾನು ಜಿಲ್ಲಾ ಪರಿಷತ್ ಮೆಂಬರ್ ಅಲ್ಲ. ಬೇಕಾದ ಅನ್ಯಾಯಗಳು ನಡೆಯುತ್ತಿವೆ ಅಲ್ಲಿ.....

ಶ್ರೀ ಎಸ್. ಆರ್. ಬೊಮ್ಮಾಯಿ.—ತಮ್ಮ ಅಭಿಪ್ರಾಯವನ್ನು ಮಾನ್ಯ ಮಂತ್ರಿಗಳು ಮುಖ್ಯ ಕಾರ್ಯದರ್ಶಿಯವರಿಗೆ ಕಳಿಸಿಕೊಡುತ್ತಾರೆ.

ಅಧ್ಯಕ್ಷರು —ಇಲ್ಲಿಗೆ ಸಾಕುಮಾಡಿ. ಶ್ರೀ ದೊಡ್ಡಮೇಟಿಯವರೇ, ನೀವು ಕೇಳಿರಿ.

ಶ್ರೀ ಎಂ. ರಾಮಪ್ಪ.—ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ಎಂಬುದು ಅರ್ಥವಾಗಲಿಲ್ಲ.

(ಗೊಂದಲ)

ಶ್ರೀ ಪಟಮಕ್ಕಿ ರತ್ನಾಕರ್.—ತಾತ್ಪೂರ್ತಿಕವಾದ ವಿಚಾರವನ್ನು ಸದನದಲ್ಲಿ ಪ್ರಸ್ತಾಪ ಮಾಡಿದ್ದಾಗಿದೆ. ಇದಕ್ಕೆ ಒಂದು ಅಂತಿಮ ರೂಪವನ್ನು ಕೊಡಬೇಕು.

ಶ್ರೀ ಆರ್. ಎನ್. ನಾಯಕ್.—ಎಲ್ಲಾ ಜಿಲ್ಲಾಪರಿಷತ್ತುಗಳಿಗೆ ಕೊಟ್ಟುಬಿಡುತ್ತೇವೆ ಎಂದರೆ ಮತ್ತೆ ನೀವು ಇರುವುದು ಏಕೆ ? ನಾವೆಲ್ಲರೂ ಗಂಟುಮೂಟೆ ಕಟ್ಟಿಬಿಡಿ ನಿಮ್ಮ ಹತ್ತಿರ ಅಧಿಕಾರ ಇಲ್ಲ. ಕೇಂದ್ರ ಸರ್ಕಾರ ಮತ್ತು ಜಿಲ್ಲಾಪರಿಷತ್ತುಗಳು ಎರಡು ಇರಲಿ, ಅಷ್ಟೇ ಸಾಕು, ನೀವು ಗಂಟುಮೂಟೆ ಕಟ್ಟಿ, ನೋಡೋಣ.

ಅಧ್ಯಕ್ಷರು.—ನೀವು ಏಕೆ ಹೀಗೆ ತಕರಾರು ಮಾಡುತ್ತಿದ್ದೀರಿ ?

(ಗೊಂದಲ)

ಶ್ರೀ ಆರ್. ಎನ್ ನಾಯಕ್.—ಈ ವ್ಯವಸ್ಥೆ ಏಕೆ ? ನಿಮಗೆ ಕೇಂದ್ರ ಸರ್ಕಾರದಿಂದ ದುಡ್ಡು ಬರಬೇಕು, ಜಿಲ್ಲಾ ಪರಿಷತ್ತುಗಳಿಂದ ಆಗಬೇಕೆಂದು ಎಂದರೆ ನೀವು ಯಾಕೆ ಇರುವುದು ?

(ಮಾನ್ಯ ಸದಸ್ಯರುಗಳಾದ ಶ್ರೀ ಬಿ. ಸ್ವಾಮಿರಾವ್, ಶ್ರೀ ಪಟಮಕ್ಕಿ ರತ್ನಾಕರ್ ಮತ್ತು ಶ್ರೀ ಆರ್. ಎನ್. ನಾಯಕ್ ಏಕಕಾಲದಲ್ಲಿ ಮಾತನಾಡಲು ಪ್ರಾರಂಭಿಸಿದರು)

ಅಧ್ಯಕ್ಷರು.—ಯಾವುದೂ ರೆಕಾರ್ಡ್ ಮಾಡಬೇಡಿ.

(ಗೊಂದಲ)

ಅಧ್ಯಕ್ಷರು.—ನೀವು ಕುಳಿತುಕೊಳ್ಳಿ ಎಂದು ಹೇಳುತ್ತಿದ್ದೇನೆ. ಸಮಸ್ಯೆ ಏಕೆ ಹೀಗೆ ಮಾಡುತ್ತಿದ್ದೀರಿ. ಎಲ್ಲರೂ ಕುಳಿತುಕೊಳ್ಳಿ ಇಲ್ಲದಿದ್ದರೆ ನಾನು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಶ್ರೀ ರಾಮಪ್ಪನವರೇ ಕುಳಿತುಕೊಳ್ಳಿ.

ಶ್ರೀ ಎಂ. ರಾಮಪ್ಪ.—ಈ ನಾಚಿಕೆಗೇಡು ಸರ್ಕಾರಕ್ಕೆ ನಾನು ಧಿಕ್ಕಾರ ಮಾಡುತ್ತೇನೆ.

(ಶ್ರೀ ಎಂ. ರಾಮಪ್ಪನವರು ಸಭೆಯಿಂದ ನಿರ್ಗಮಿಸಿದರು)

(ಸಭೆಯಲ್ಲಿ ಗೊಂದಲ. ಅನೇಕ ಸದಸ್ಯರು ಮಾತನಾಡುತ್ತಲೇ ಇದ್ದರು)

ಅಧ್ಯಕ್ಷರು.—ಯಾವುದೂ ರೆಕಾರ್ಡ್ ಆಗುವುದಿಲ್ಲ.

* * *

ಅಧ್ಯಕ್ಷರು.—ಕುಳಿತುಕೊಳ್ಳಿ ಎಂದು ನಾನು ಹೇಳುತ್ತಿದ್ದೇನೆ. ನೀವು ಕುಳಿತುಕೊಳ್ಳದೇ ಇದ್ದರೆ ನಾನು ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುತ್ತೇನೆ. ನೀವು ಕುಳಿತುಕೊಳ್ಳುತ್ತೀರೋ ಹೇಗೆ ? ಇಲ್ಲದಿದ್ದರೆ ಯಾವುದೂ ರೆಕಾರ್ಡಿಗೆ ಹೋಗುವುದಿಲ್ಲ. ಯಾರು ಮಾತನಾಡಿದರೂ ರೆಕಾರ್ಡಿಗೆ ಹೋಗುವುದಿಲ್ಲ.

(ಗೊಂದಲ)

ಶ್ರೀ ಎಸ್ ಆರ್. ಬೊಮ್ಮಾಯಿ.—ಜಿಲ್ಲಾಪರಿಷತ್ ಕಾನೂನನ್ನು ಭಿನ್ನಾಭಿಪ್ರಾಯ ಇಲ್ಲದೆ ಎಲ್ಲರೂ ಒಮ್ಮತದಿಂದ ಪಾಸ್ ಮಾಡಿದ್ದೇವೆ. ಇಲ್ಲಿ ಸ್ವಲ್ಪ ಕೇಳಿ. ಅಧಿಕಾರ ವಿಕೇಂದ್ರೀಕರಣದ ಬಗ್ಗೆ ಸಂಪೂರ್ಣವಾಗಿ ನಮಗೆ ನಂಬಿಕೆ ಇದೆ. ಅಲ್ಲಿ ಇಲ್ಲಿ ತಪ್ಪು ಮಾಡಿದ್ದರೆ ಕಾನೂನಿನಲ್ಲಿ ಅವಶ್ಯಕತೆ ಇದ್ದರೆ ತಿದ್ದುಪಡಿ ಮಾಡೋಣವೆಂದು ಹೇಳಿದ್ದೇನೆ. ಈಗ ಶ್ರೀ ರಾಮಪ್ಪನವರು ಹೇಳಿದ ಅಭಿಪ್ರಾಯವನ್ನು ಮುಖ್ಯ ಕಾರ್ಯದರ್ಶಿಯವರಿಗೆ ಕಳಿಸಿಕೊಡುತ್ತೇವೆ ಎಂದು ಹೇಳಿದ್ದೇವೆ. ದಯವಿಟ್ಟು ಇವು ಹೊಸದಾಗಿ ಬಂದಂಥ ಸಂಸ್ಥೆಗಳು ತಪ್ಪಾಗುತ್ತವೆ. ತಪ್ಪಾಗಿರುವುದಾದರೆ ತಿದ್ದುಪಡಿ ತರುವ ಬಗ್ಗೆ ಆಲೋಚನೆ ಮಾಡೋಣ.

ಶ್ರೀ ಆರ್. ಎನ್. ನಾಯಕ್.—ನಿಮ್ಮ ಹತ್ತಿರ ಅಧಿಕಾರ ಇಲ್ಲವೆಂದು ಹೇಳುತ್ತೀರಿ. ಮುಖ್ಯ ಕಾರ್ಯದರ್ಶಿಯವರಿಗೆ ಅಧಿಕಾರ ಇದೆಯಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಅವರು ಜಿಲ್ಲಾ ಪರಿಷತ್ತು ಮುಂದೆ ಇಡುತ್ತಾರೆ. ನಿಮಗೆ ಜನತಂತ್ರದಲ್ಲಿ ನಂಬಿಕೆ ಇಲ್ಲ, ಅಧಿಕಾರ ವಿಕೇಂದ್ರೀಕರಣದ ಬಗ್ಗೆ ನಂಬಿಕೆ ಇಲ್ಲ.

ಶ್ರೀ ಆರ್. ಎನ್. ನಾಯಕ್.—ನನ್ನನ್ನು ಏನು ಯಾರ ಮೇಲೂ ನಂಬಿಕೆ ಇಲ್ಲದ ಹುಚ್ಚ ಎಂದು ತಿಳಿದುಕೊಂಡಿದ್ದೀರೇನು ?

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅನ್ಯಾಯ ಆಗಿದೆ ಸರಿಪಡಿಸಿ ಎಂದರೆ, ನಿಮಗೆ ಅದರಲ್ಲಿ ನಂಬಿಕೆ ಇಲ್ಲ, ಇದರಲ್ಲಿ ನಂಬಿಕೆ ಇಲ್ಲ ಎಂದು ಹೇಳುತ್ತೀರಲ್ಲಾ ?

---

* ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ರೆಕಾರ್ಡ್ ಮಾಡಲಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇವು ಸ್ವತಂತ್ರವಾದ ಸಂಸ್ಥೆಗಳು ಅಲ್ಲಿ ಬೇಕಾದರೆ ಚರ್ಚೆ ಮಾಡಬಹುದು. ಮುಖ್ಯ ಕಾರ್ಯದರ್ಶಿಯವರಿಗೆ ಕಳಿಸಿಕೊಡುತ್ತೇವೆ ಎಂದು ಹೇಳಿದ್ದೇವೆ. ಇನ್ನೇನು ಮಾಡಲು ಸಾಧ್ಯ ? ಇದಕ್ಕೆ ಒಂದು ಲಿಮಿಟ್ ಇದೆ.

ಶ್ರೀ ಎ. ಲಕ್ಷ್ಮೀಸಾಗರ್.—ಗಂಟಲು ಜಾಸ್ತಿ ಇದೆಯೆಂದು ಕೂಗಿದರೆ ಪ್ರಯೋಜನ ಆಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾವು ಇಬ್ಬರು ಮಾಡುತ್ತಿದ್ದೇವೆ ಎಂದು ನೀವಿಬ್ಬರೂ ಮಾಡುತ್ತಿದ್ದೀರೇನು ?

೩. ಸಾಗರ ವಿಭಾಗದ ಅರಣ್ಯದಿಂದ ಹಾಲ್ಮಡ್ಡಿ ಕದಿಯುತ್ತಿದ್ದವರನ್ನು ಹಿಡಿದ ಜಿಲ್ಲಾ ಅರಣ್ಯ ಅಧಿಕಾರಿಯವರನ್ನು ವರ್ಗ ಮಾಡಿರುವುದು.

ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).— ಮಾನ್ಯ ಅಧ್ಯಕ್ಷರೇ, ಸಾಗರ ಅರಣ್ಯ ವಿಭಾಗದಿಂದ ಹಾಲ್ಮಡ್ಡಿ ಕದಿಯುತ್ತಿದ್ದವರನ್ನು ಹಿಡಿದ ಜಿಲ್ಲಾ ಅರಣ್ಯ ಅಧಿಕಾರಿಯವರನ್ನು ವರ್ಗಾವಣೆ ಮಾಡಿರುವ ಬಗ್ಗೆ ಮಾನ್ಯ ಕೃಷಿ ಹಾಗೂ ಅರಣ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ ರಾಚಯ್ಯ (ಕೃಷಿ ಮತ್ತು ಅರಣ್ಯಖಾತೆ ಸಚಿವರು).— ಮಾನ್ಯ ಅಧ್ಯಕ್ಷರೇ, ಸಾಗರ ಡಿವಿಜನ್‌ನ ಡೆಪ್ಯುಟಿ ಕನ್‌ಸರ್ವೇಟರ್ ಆಫ್ ಫಾರೆಸ್ಟ್ ಅವರನ್ನು ವರ್ಗ ಮಾಡಿರುತ್ತಾರೆ. ಇನ್ನೂ ಕೂಡಾ ಅವರು ಚಾರ್ಜ್ ಕೊಟ್ಟಿಲ್ಲ. ಈ ವಿಷಯದಲ್ಲಿ ಈಗಾಗಲೇ ಸಂಬಂಧಪಟ್ಟ ಚೀಫ್ ಕನ್ಸರ್ವೇಟರ್ ಜೊತೆಯಲ್ಲಿ ಚರ್ಚೆ ಮಾಡಿ, ಈ ವರ್ಗ ಆಗಿದೆಯಲ್ಲಾ ಇದು ಯಾವ ಸಂದರ್ಭದಲ್ಲಿ ವರ್ಗ ಆಯಿತಂ, ಇದಕ್ಕೆ ಕಾರಣ ಏನು ಎಂದು ಕೇಳಿದ್ದೇನೆ. ನನಗೆ ಇನ್ನೂ ಮಾಹಿತಿ ಬಂದಿಲ್ಲ ಬಂದಮೇಲೆ ನೋಡುತ್ತೇನೆ. ಈ ರೀತಿ ಇವರನ್ನು ಹಠಾತ್ ವರ್ಗಾವಣೆ ಮಾಡಿರುತ್ತಾರೆಯೇ ಅಥವಾ ಹಿಂದಿನಿಂದಲೂ ಏನಾದರೂ ಇವರ ವರ್ಗಾವಣೆಗೆ ಪ್ರಸ್ತಾವನೆಗಳು ಏಂದಿವೆಯೇ ಇಲ್ಲವೇ ಎಂಬ ಬಗ್ಗೆ ಪೂರ್ಣ ಮಾಹಿತಿ ಸಿಕ್ಕಿಲ್ಲ. ಆದಕ್ಕೋಸ್ಕರ ಆ ಮಾಹಿತಿ ತರಿಸಿ ಮಾನ್ಯ ಸದಸ್ಯರಿಗೆ ಉತ್ತರ ಕೊಡುತ್ತೇನೆ.

ಶ್ರೀ ಗೋಪಾಲ ಮುಕುಂದ ಕಾನಡೆ.— ಅಧ್ಯಕ್ಷರೇ, ಸರಕಾರಕ್ಕೆ ಮತ್ತು ಒಳ್ಳೆಯ ಅಧಿಕಾರಿಗಳಿಗೆ ವಿರೋಧ ಇದೆ. ಕೋಯಾ ಎನ್ನುವಂತಹ ಜನತಾ ಮುನಿಸಿಪಾಲಿಟಿ ಮೆಂಬರ್ ಮನೆಯಲ್ಲಿ ನಾಲ್ಕು ಸಾವಿರ ಕೆ ಜಿ. ಹಾಲ್ಮಡ್ಡಿ ಭೂಪ ಸಿಕ್ಕಿದೆ ಅದನ್ನು ಈ ಅರಣ್ಯ ಅಧಿಕಾರಿಗಳು ಹೋಗಿ ಹಿಡಿದಿದ್ದಾರೆ. ಜನತಾ ಪಕ್ಷದ ಮುಖಂಡರುಗಳು ಬಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಿ ಇವರನ್ನು ಟ್ರಾನ್ಸ್‌ಫರ್ ಮಾಡಿಸಿರುತ್ತಾರೆ. ನಾನು ಸರಕಾರಕ್ಕೆ ಹೇಳುವುದು ಇಷ್ಟೇ. ಭ್ರಷ್ಟತನ ಮಾಡುವವರನ್ನು, ಸ್ಮಗ್ಲಿಂಗ್ ಮಾಡುವವರನ್ನು ಹಿಡಿಯಬೇಕೋ ಬೇಡವೋ ? ಹಿಡಿದರೆ ಟ್ರಾನ್ಸ್‌ಫರ್ ಮಾಡುತ್ತೀರಿ, ಹಿಡಿಯದೇ ಬಿಟ್ಟರೆ ಪ್ರಮೋಷನ್ ಕೊಡುತ್ತೀರಿ. ಈ ಟ್ರಾನ್ಸ್‌ಫರ್ ಕ್ಯಾನ್ಸಲ್ ಮಾಡುತ್ತೀರಾ ? ಒಳ್ಳೆಯ ಅಧಿಕಾರಿಗಳನ್ನು ಟ್ರಾನ್ಸ್‌ಫರ್ ಮಾಡಿ, ಅವರಿಂದ ಆಗುವ ಒಳ್ಳೆಯ ಕೆಲಸಕ್ಕೆ ತೊಂದರೆ ಕೊಡುವಂತಹ ಭ್ರಷ್ಟ ಅಧಿಕಾರಿಗಳನ್ನು ಹಿಡಿಯಲಿಕ್ಕೆ ಸರಕಾರ ಏನು ಕ್ರಮ ಕೈಗೊಳ್ಳುತ್ತದೆ.

ಶ್ರೀ ಬಿ. ರಾಚಯ್ಯ.— ಭ್ರಷ್ಟ ಅಧಿಕಾರಿಗಳಿಗೆ ರಕ್ಷಣೆ ಕೊಡುವುದಿಲ್ಲ. ಯಾರು ಒಳ್ಳೆಯ ಕೆಲಸ ಮಾಡುತ್ತಾರೆ ಅವರಿಗೆ ರಕ್ಷಣೆ ಕೊಡ ತ್ತೇವೆ. ಪೂರ್ಣ ಮಾಹಿತಿ ನನ್ನ ಹತ್ತಿರ ಇಲ್ಲ ಎಂದು ಹೇಳಿದ್ದೇನೆ. ಈ ಭಾವನೆ ಅವರಿಗೆ ಬೇಡ.

ಅಧ್ಯಕ್ಷರು.— ಮಾನ್ಯ ಡಿಸೋಜಾರವರೇ ತಾವು ಕೇಳಿರಿ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜಾ (ಮಂಗಳೂರು).— ಅಧ್ಯಕ್ಷರೇ, ೪೫೦೦ ಕೆ.ಜಿ ಹಾಲು ಮಡ್ಡಿಯನ್ನು ಹಿಡಿದಿದ್ದಾಗಿ. ಮಾನ್ಯ ಕಾನಡೆಯವರು ಹೇಳಿದಹಾಗೆ ಇಂತಹ ಒಳ್ಳೆಯ ಆಫೀಸರ್‌ನ್ನು ಟ್ರಾನ್ಸ್‌ಫರ್ ಮಾಡಿದರೆ, ಇನ್ನು ಮುಂದೆ ನಮ್ಮ ಅರಣ್ಯ ಸಂಪತ್ತೆಲ್ಲಾ ಮಯವಾಗಿಬಿಹುದು. ಆದಕ್ಕಾಗಿ ನಾವು ಸರಕಾರವನ್ನು ಕೇಳುತ್ತಿದ್ದೇವೆ, ಯಾರು ಸರಿಯಾಗಿ ಕೆಲಸ ಮಾಡುತ್ತಿದ್ದಾರೆ, ಯಾರು ನೀತಿಯಿಂದ ಕೆಲಸ ಮಾಡುತ್ತಿದ್ದಾರೆ ಅವರಿಗೆ ರಕ್ಷಣೆ ಕೊಡುತ್ತೀರಾ ? ಇಲ್ಲ ಎಂದರೆ ಭ್ರಷ್ಟ ಅಧಿಕಾರಿಗಳಿಗೆ ರಕ್ಷಣೆ ಕೊಡುತ್ತೀರಾ ಎಂದು ನಾನು ಸರಕಾರವನ್ನು ಕೇಳುತ್ತೇನೆ.